ಮಾಡಿಸಲಾಯಿತು. ಒಂದು ತಿಂಗಳ ಹಿಂದೆ ಮತ್ತೊಮ್ಮೆ ಇದೇ ತೆರವಾದ ಪ್ರಯತ್ನ ನಡೆದಿದ್ದು ರಾತ್ರೋರಾತ್ರಿ ಕೆರೆಯಲ್ಲಿ ಮಣ್ಣನ್ನು ಹಾಕಿ ರಸ್ತೆ ಮಾಡಲು ಪ್ರಯತ್ನ ನಡೆಸಿದ್ದರು. ಕೂಡಲೇ ಇಲಾಖೆಯ ಮಣ್ಣು ಎತ್ತುವ ಯಂತ್ರವನ್ನು ಸ್ಥಳಕ್ಕೆ ತೆಗೆದುಕೊಂಡು ಹೋಗಿ ಸದರಿ ಕೆರೆಗೆ ಖಾಸಗಿ ವಾಹನಗಳು ಹೋಗದಂತೆ ಕಂದಕವನ್ನು ತೆಗೆಸಲಾಯಿತು. ಈ ಕೆರೆಗೆ ಬೇಲಿ ಹಾಕಿಸುವುದಕ್ಕೆ ಈಗಾಗಲೇ ಸಿದ್ಧತೆ ಮಾಡಿಕೊಳ್ಳಲಾಗಿದೆ. ಇತ್ತೀಚೆಗೆ ಕೆರೆಯ ಒಂದು ಮೂಲೆಯಲ್ಲಿ ಕೋರ್ಟ್ ತಡೆಯಾಜ್ಞೆ ಇದೆಯೆಂದು ಒಂದು ಅನಧಿಕೃತ ಬೋರ್ಡ್ ಹಾಕಿದ್ದು ಇದೇ. ಆದರೆ ಈ ಬಗ್ಗೆ ಅರಣ್ಯ ಇಲಾಖೆಗೆ ನ್ಯಾಯಾಲಯದಿಂದ ಯಾವುದೇ ಸೂಚನೆ ಅಥವಾ ಆದೇಶ ಬಂದಿರುವುದಿಲ್ಲ. ಈ ಕೆರೆಗೆ ಬೇರೆಬೇಲಿ ಹಾಕಿಸುವ ಕೆಲಸವನ್ನು ಮತ್ತು ಸಂರಕ್ಷಿಸಲು ಕೋರ್ಟಿನ ಆದೇಶದ ನಿರ್ದೇಶನವನ್ನು ಗಮನದಲ್ಲಿಟ್ಟುಕೊಂಡು ಕ್ರಮ ಕೈಗೊಳ್ಳಲಾಗುವುದು. ಇತ್ತೀಚಿನ ಅವಧಿಯಲ್ಲಿ ಕೆರೆಯ ಜಾಗದಲ್ಲಿ ಯಾವುದೇ ಮರಗಳನ್ನು ಕಡಿದಿರುವುದಿಲ್ಲ.

ವಿಷಯ: (ಇ) ಆಶ್ರಯ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ಹಣ ಬಿಡುಗಡೆಯಾಗದಿರುವ ಬಗ್ಗೆ.

ಶ್ರೀ ಐ.ಎಂ. ಜಯರಾಮಶೆಟ್ಟಿ:- (ಬೈಂದೂರು) ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ 1994-95ನೇ ಸಾಲಿನಲ್ಲಿ 53 ಲಕ್ಷ ರೂಪಾಯಿಗಳು ಆಶ್ರಯ ಯೋಜನೆಯಲ್ಲಿ ಹಾಗೂ ಅಂಬೇಡ್ಕರ್ ಯೋಜನೆಯಲ್ಲಿ 27 ಲಕ್ಷ ರೂಪಾಯಿಗಳು ಬಿಡುಗಡೆ ಆಗದೆ, ಈ ಹಣದ ಬಿಡುಗಡೆಗಾಗಿ ಸದನದಲ್ಲಿ ಪ್ರಸ್ತಾಪಿಸಬಯಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು):- ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿಗೆ 1994-95ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿ 53.00 ಲಕ್ಷ ರೂ.ಗಳು ಹಾಗೂ ಅಂಬೇಡ್ಕರ್ ಯೋಜನೆಯಡಿಯಲ್ಲಿ 20.00 ಲಕ್ಷ ರೂ.ಗಳು ಬಿಡುಗಡೆಯಾಗದೆ ಫಲಾನುಭವಿಗಳಿಗೆ ಹಣ ಸಿಗದೆ ಬಡವರು ಅತಂತ್ರ ಸ್ಥಿತಿ ಎದುರಿಸುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆ. ದಕ್ಷಿಣ ಕನ್ನಡ ಜಿಲ್ಲೆಗೆ ಆಶ್ರಯ ಕಾರ್ಯಕ್ರಮದಡಿ 1994-95ನೇ ಸಾಲಿಗೆ ರೂ.4.42 ಕೋಟಿ ಹಣ ಬಿಡುಗಡೆಗೆ ಬಾಕಿ ಇರುತ್ತದೆ. ಈ ಹಣವನ್ನು ಮಾರ್ಚ್ ಅಂತ್ಯದೊಳಗಾಗಿ ಬಿಡುಗಡೆ ಮಾಡಲು ಸರ್ಕಾರ ಕ್ರಮ ವಹಿಸಿದೆ. ಅದೇ ರೀತಿ ಅಂಬೇಡ್ಕರ್ ಯೋಜನೆಯಡಿಯಲ್ಲೂ ಸಹ ಬಾಕಿ ಬಿಡುಗಡೆ ಆಗಬೇಕಾದ ಹಣವನ್ನು ಸಹ ಕೂಡಲೇ ನೀಡಲು ಕ್ರಮ ಕೈಗೊಳ್ಳಲಾಗುವುದು.

ವಿಷಯ:- (ಈ) ದಕ್ಷಿಣ ಕನ್ನಡ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ಅಪಘಾತತಪ್ಪಿಸುವ ಬಗ್ಗೆ.

ಶ್ರೀ ಕೆ.ಪ್ರಭಾಕರಚಂದ್ರ ಶೆಟ್ಟಿ: (ಕುಂದಾಪುರ):- ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಹೆಚ್ಚುತ್ತಿರುವ ವಾಹನ ಸಂಚಾರಗಳಿಂದ ಹಾಗೂ ಖಾಸಗಿ ಬಸ್ಸುಗಳ ಪೈಪೋಟಿಯಿಂದ ದಿನನಿತ್ಯ ಪತ್ರಿಕೆಗಳಲ್ಲಿ ಅಪಘಾತಗಳ ವಿಚಾರವನ್ನು ಕೇಳುತ್ತಿದ್ದೇವೆ.

ದಕ್ಷಿಣ ಕನ್ನಡ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸುತ್ತಿರುವ ಜನರು ಅನಿಶ್ಚಿತತೆಯ ಬದುಕನ್ನು ನಡೆಸುತ್ತಿದ್ದಾರೆ. ಈ ಅವಘಡಗಳ ಸರಮಾಲೆಯನ್ನು ತಪ್ಪಿಸಲು 4ರಸ್ತೆಗಳಾಗಿ ಮಾರ್ಪಾಡು ಮಾಡುವುದರೊಂದಿಗೆ ಈಗಾಗಲೇ ಸಂಚರಿಸುತ್ತಿರುವ ರೈಲ್ವೆಯನ್ನು ಮಂಗಳೂರಿನಿಂದ ಬೈಂದೂರುರವರೆಗೆ ಕಛೇರಿ ಸಮಯದಲ್ಲಿ ದಿನಕ್ಕೆ ಪ್ರತಿ ಗಂಟೆಗೊಮ್ಮೆಸಂಚರಿಸುವಂತೆ ಕೇಂದ್ರ ಸರ್ಕಾರದ ಮೂಲಕ ರೈಲ್ವೆ ಇಲಾಖೆಯನ್ನು ಮನವೊಲಿಸುವಲ್ಲಿ ರಾಜ್ಯ ಸರ್ಕಾರವು ತುರ್ತು ಕ್ರಮ ಕೈಗೊಂಡು ಹೆಚ್ಚುವರಿ ರೈಲು ಸಂಚಾರದ ವ್ಯವಸ್ಥೆ ಮಾಡಬೇಕೆಂದು ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) ಅಧ್ಯಕ್ಷರೇ, ತಮ್ಮ ಅನುಮತಿಯನ್ನು ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟಾರೆ 152 ಕಿ.ಮೀ. ರಾಷ್ಟ್ರೀಯ ಹೆದ್ದಾರಿ 17 ಹಾದು ಹೋಗುತ್ತದೆ. ಹೆದ್ದಾರಿಯು ಎರಡು ಪಥ ರಸ್ತೆಯಾಗಿರುತ್ತದೆ. ಹೆಚ್ಚುತ್ತಿರುವ ವಾಹನಗಳ ಸಾಂದ್ರತೆಯನ್ನು ಗಮನಿಸಿ ಕೇರಳ ಗಡಿಯಿಂದ ಬೈಂದೂರಿನವರೆಗೆ (ಒಟ್ಟಾರೆ 137 ಕಿ.ಮೀ) ನಾಲ್ಕು ಪಥಗಳ ರಸ್ತೆಯನ್ನಾಗಿ ವಿಸ್ತರಿಸಲು ಪಂಚವಾರ್ಷಿಕ ಯೋಜನೆಯಡಿಯಲ್ಲಿ, ಪರಿಗಣಿಸಲು ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಕೊಂಕಣ ರೈಲ್ವೆಯು ಈಗಾಗಲೇ ಮಂಗಳೂರಿನಿಂದ ಕುಂದಾಪುರದವರೆಗೆ ರೈಲ್ವೆ ಸಂಚಾರವನ್ನು ಆರಂಭಿಸಿದ್ದು, ಬೈಂದೂರಿನವರೆಗೆ ಇಷ್ಟರಲ್ಲೆ ವಿಸ್ತರಿಸುವ ಸಂಭವ ಇದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಂಕಣ ರೈಲ್ವೆ ಕಾಮಗಾರಿಯು ಪೂರ್ಣಿಸಿ ರೈಲ್ವೆ ಸಂಚಾರ ಆರಂಭವಾದ ನಂತರ ಸಂಚಾರದ ಸಾಂದ್ರತೆ ಪರಿಗಣಿಸಿ ಹೆದ್ದಾರಿಯ ರೈಲ್ವೆ ಓಡಾಟವನ್ನು ಸಹ ಹೆಚ್ಚಿಸುವ ಬಗ್ಗೆ ಕೇಂದ್ರ ಸರ್ಕಾರದ ಮೂಲಕ ರೈಲ್ವೆ ಇಲಾಖೆಯನ್ನು ಒತ್ತಾಯಿಸಲಾಗುವುದು.

ವಿಷಯ (ಉ): ಶಿಕ್ಷಕರನ್ನು ಗಣತಿ ಮತ್ತು ಹಸಿರು ಕಾರ್ಡಿನ ಪರಿಶೀಲನಾ ಕೆಲಸವನ್ನು ತೊಡಗಿಸಿರುವುದು.

ಶ್ರೀ ರಾಜಶೇಖರ ವಿ. ಶೀಲವಂತ:- (ಗುಳೇದಗುಡ್ಡ) ಮಾನ್ಯ ಅಧ್ಯಕ್ಷರೆ, ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರ ಪಾತ್ರ ಹೆಚ್ಚಾಗಿದ್ದು ಜವಾಬ್ದಾರಿ ಹೆಚ್ಚುತ್ತಾ ಹೋಗುತ್ತಿದೆ. 7ನೇ ಕ್ಲಾಸಿನ ವಿದ್ಯಾರ್ಥಿಗಳಿಗೆ ಈ ವರ್ಷದಿಂದ ಸಾರ್ವತ್ರಿಕ ಪರೀಕ್ಷೆಗಳು ಹಾಗೂ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿರುವುದನ್ನು ಗಮನಿಸಿ, ಶಿಕ್ಷಕರಿಗೆ ಸರಕಾರ ಗಣತಿ ಕೆಲಸ, ಹಸಿರು ಕಾರ್ಡಿನ ಪರಿಶೀಲನಾ ಕೆಲಸ ಮುಂತಾದ ಕೆಲಸದಲ್ಲಿ ತೊಡಗಿಸುವುದು ವಿದ್ಯಾರ್ಥಿಗಳಿಗೆ ಪರೋಕ್ಷವಾಗಿ ತೊಂದರೆ ಕೊಟ್ಟಂತಾಗುತ್ತದೆ. ಕಾರಣ ಬೇರೆ ಬೇರೆ ಇಲಾಖೆಯಲ್ಲಿ ಹೆಚ್ಚು ಕೆಲಸ ಇಲ್ಲದ ಅಥವಾ ಸ್ವಯಂ ಸೇವಾ ಸಂಸ್ಥೆಗಳಿಂದ ಈ ಕೆಲಸ ಮಾಡಿಸಬಹುದಾಗಿದೆ. ಈ ವಿಷಯ ಸಭೆಯು ಮುಂದೆ ತರುತ್ತೇನೆ. ಈ ವಿಷಯವಾಗಿ ಯೋಗ್ಯ ಕ್ರಮ ಕೈಕೊಳ್ಳಲು ವಿನಂತಿಸುತ್ತೇನೆ.